<u>ಅಸಲು ದಾವಾ:-</u> 204/2017 ಪಿ.ಡಬ್ಲ್ಯೂ:- 3

ದಿನಾಂಕ: 15.04.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ.ಎಂ ಜೆ ವಕೀಲರಿಂದ</u>

ವಾದಿ ಹಾಗೂ ಅವರ ಮಗ ಪಿಡಬ್ಲ್ಯೂ 2 ರವರು ನನಗೆ ಏನಾಗಬೇಕು ಎಂದರೆ ಸಾಕ್ಷಿಯು ಸ್ನೇಹಿತರು ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ನಾನೇ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುವ ಮೊದಲು ದಾವಾ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದರೆ ಸಾಕ್ಷಿಯು ಮಾಹಿತಿ ಇತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಮಾಹಿತಿ ನನಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಕ್ರಯಕ್ಕೆ ಪಡೆಯುವಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 9 ಕ್ರಯಪತ್ರಕ್ಕೆ ಸಾಕ್ಷಿ ಸಹಿ ಹಾಕಿದ್ದೀರಾ ಎಂದರೆ ಇಲ್ಲ. ದಾವಾ ಆಸ್ತಿಯನ್ನು ವಾದಿಯು ಯಾರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಪಳನಿಯಮ್ಮ ಹಾಗೂ ದೊರೆಸ್ವಾಮಿ ಎಂದು ನುಡಿಯುತ್ತಾರೆ. ಯಾವ ದಿನಾಕದಂದು ವಾದಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ದಿನಾಂಕ ನೆನಪಿಲ್ಲ. ದಾವಾ ಆಸ್ತಿಯು ಪಳನಿಯಮ್ಮ ಹಾಗೂ ದೊರೆಸ್ವಾಮಿ ರವರಿಗೆ ಹೇಗೆ ಬಂದಿರುತ್ತದೆ ಗೊತ್ತಿದೆಯಾ ಎಂದರೆ ಗೊತ್ತಿಲ್ಲ.

ದಾವಾ ಆಸ್ತಿಯ ಸಂಖ್ಯೆ ಎಷ್ಟು ಎಂದರೆ ಸಾಕ್ಷಿಯು 156 ಹಾಗೂ 147 ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂಧಿ ಎಂದರೆ ಪೂರ್ವಕ್ಕೆ ರಂಗಸ್ವಾಮಿರವರ ಸೈಟು, ಪಶ್ಚಿಮಕ್ಕೆ ಪ್ರತಿವಾದಿಗಳ ಸೈಟು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಲಿಂಗಾಪುರ ಗಡಿ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ವಿಸ್ತೀರ್ಣ ಎಷ್ಟು ಎಂದರೆ ಪೂ-ಪ 30 ಅಡಿ, ಉ-ದ 50 ಅಡಿ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಪಳನೀಯಮ್ಮ ರವರಿಗೆ ಗ್ರಾಮ ಪಂಚಾಯತಿಯಿಂದ ಮಂಜೂರಾಗಿತ್ತು ಎಂದರೆ ಗೊತ್ತಿಲ್ಲ. 148 ಸೈಟ್ ನಂಬರ್ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿಗೆ ಇರುವ ವಿಚಾರ

ಗೊತ್ತಿದೆಯಾ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಸೈಟ್ ನಂ.148 ರಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮನೆ ಕಟ್ಟಿಕೊಂಡಿದ್ದಾರೆ ಆದರೆ ಅದರ ಸೈಟ್ ನಂಬರ್ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2013-14 ರ ಸಾಲಿನ ಬಸವ ವಸತಿ ಕಲ್ಯಾಣ ಯೋಜನೆಯಡಿಯಲ್ಲಿ ಪ್ರತಿವಾದಿಗಳು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಪ್ರತಿವಾದಿಗಳು ಕಂದಾಯ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಮನೆಯಲ್ಲಿ ವಾಸಮಾಡುತ್ತಿದ್ದಾರೆ ಆದರೆ ಕಂದಾಯ ಕಟ್ಟುತ್ತಿರುವ ಬಗ್ಗೆ ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗೂ ಪ್ರತಿವಾದಿಗಳ ಸೈಟ್ ನಂಬರ್ 148 ಕ್ಕೂ ಮಧ್ಯೆ 8 ನಿವೇಶನಗಳು ಬರುತ್ತವೆ ಎಂದರೆ ಸಾಕ್ಷಿಯು ಮಧ್ಯದಲ್ಲಿ ಯಾವುದೇ ನಿವೇಶನ ಇಲ್ಲ ಎರಡೂ ಅಕ್ಕಪಕ್ಕದಲ್ಲಿ ಇದ್ದಾವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಹಾಗೂ ಸೈಟ್ ನಂ.148 ಹೊಸಹಳ್ಳಿ ಸರ್ವೆ ನಂ.68 ರಲ್ಲಿ ಬರುತ್ತವೆ ಎಂದರೆ ಸರಿ. ಸರ್ವೆ ನಂ.68 ರ ಜಮೀನಿನಲ್ಲಿ ಪಳನಿಯಮ್ಮರವರಿಗೆ ನಿವೇಶನ ಮಂಜೂರಾಗಿತ್ತು ಎಂದರೆ ಸರಿ. ಪಿಡಬ್ಲ್ಯೂ 2 ರವರು ನನಗೆ ಸ್ನೇಹಿತರಾಗಿದ್ದರಿಂದ ಅವರ ಪರವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಅಳತೆ ಮಾಡುವ ಸಂದರ್ಭ ನೀವು ಹಾಜರಿದ್ದರಾ ಎಂದರೆ ಸಾಕ್ಷಿಯು ಹಾಜರಿದ್ದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಯಾರು ಅಳತೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ಇಲಾಖೆಯವರು ಎಂದು ನುಡಿಯುತ್ತಾರೆ. ಸರ್ವೆ ಸಂದರ್ಭ ಯಾರ್ಯಾರು ಹಾಜರಿದ್ದರು ಎಂದರೆ ಸಾಕ್ಷಿಯು ಗ್ರಾಮ ಪಂಚಾಯತಿ ಅಧ್ಯಕ್ಷರು, ಪಿಡಿಓ ಹಾಗೂ ಪಿಡಬ್ಲ್ಯೂ 2 ರವರು ಹಾಜರಿದ್ದರು ಎಂದು ನುಡಿಯುತ್ತಾರೆ. ಅಳತೆ ಮಾಡುವ ಸಂದರ್ಭ ಮಹಜರ್ ಗೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಅವರು ಏನು ಬರೆಸಿಕೊಳ್ಳಲಿಲ್ಲ ಎಂದು ನುಡಿಯುತ್ತಾರೆ. ಪಳನಿಯಮ್ಮವಾಗಲೀ ಹಾಗೂ ವಾದಿಯಾಗಲೀ ದಾವಾ ಆಸ್ತಿಯಲ್ಲಿ ಯಾವತ್ತೂ ಸಹ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸೈಟ್ ನಂಬರ್ 148 ಪ್ರತಿವಾದಿಗಳಿಗೆ ಸೇರಿದ್ದು ಅದರಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಆದರೆ ಅದರ ಸೈಟ್ ನಂಬರ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗಳ ಆಸ್ತಿ ನಂಬರ್ ಹಾಗೂ ಪ್ರತಿವಾದಿಗಳ ಆಸ್ತಿ ನಂಬರ್ ಗೊಂದಲ ಇರುವುದರಿಂದ ವಾದಿಯು ಈ ದಾವೆ ಹಾಕಿರುತ್ತಾರೆ ಎಂದರೆ ಸರಿ.

ಪ್ರತಿವಾದಿಗಳ ಆಸ್ತಿ ನಂಬರ್ 148 ರ ಪೂರ್ವಕ್ಕೆ ಚೆಲುವಪ್ಪ ರವರ ಸ್ವತ್ತು, ಪಶ್ಚಿಮಕ್ಕೆ ಮುತ್ತಪ್ಪ ರವರ ಸ್ವತ್ತು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಲಿಂಗಾಪುರ ಗಡಿ ಬರುತ್ತದೆ ಎಂದರೆ ಗೊತ್ತಿಲ್ಲ. ವಾದಿಗೆ ಅನುಕೂಲ ಮಾಡಿಕೊಡುವ ಉದ್ದೇಶದಂದ ದಾವಾ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ